ಇನ್ನೊಂದು ಕೋಣೆಯಿತ್ತು. ಮೊದಲೆಲ್ಲ ಈ ಕೋಣೆಯಲ್ಲಿ ಅಜ್ಜನ ಊರಾದ ಬಂಕಿಕೊಡ್ಲದಿಂದ ಬರುತ್ತಿದ್ದ ತೆಂಗಿನಕಾಯಿಗಳನ್ನು ಶೇಖರಿಸುತ್ತಿದ್ದರೆಂಬ ನೆನಪು. ಅದೇ ಕೋಣೆಯೊಳಗೆ ಈಗ ಸದಾ ಮತ್ತು ಅವನಮ್ಮ ಮೆಹು ಮಾಮಿ (ಹಾಗಂತಲೇ ಕರಿ ಎಂದು ಸುಗಂಧಿ ಮಾಮಿಯೇ ನನಗೆ ಹೇಳಿಕೊಟ್ಟಿದ್ದು) ವಾಸವಾಗಿದ್ದರು.

ಶಾಲೆಗೆ ರಜೆ ಬೀಳುವ ಪುರುಸೊತ್ತಿಲ್ಲದೇ ಅಮ್ಮ ತನ್ನ ಬ್ಯಾಂಕಿನ ಕೆಲಸಕ್ಕೆ ಎರಡು ದಿನದ ಲೀವ್ ಹಾಕಿ ನನ್ನನ್ನು ಎಳೆದುಕೊಂಡು, ಬ್ಯಾಗನ್ನು ಹೆಗಲಿಗೇರಿಸಿಕೊಂಡು ಹುಬ್ಬಳ್ಳಿಯಿಂದ ಅಂಕೋಲೆಯ ಕಡೆಗೆ ಹೊರಡುವ ಬಸ್ಸು ಹತ್ತುತ್ತಿದ್ದಳು. ಕೆಲವೊಮ್ಮೆ ಮಧ್ಯಾಹ್ನವೇ ಕಡೆಯ ಪರೀಕ್ಷೆ ಬರೆದು ಸಂಜೆಯೇ ಈ ಪ್ರಯಾಣ ಕೈಗೊಂಡಿದ್ದೂ ಇದೆ. ಅಂಕೋಲೆಯ ಕಡೆಗೆ ಹೋಗುವ ಎಲ್ಲ ಬಸ್ಸುಗಳೂ ಯಲ್ಲಾಪುರದ ಮೇಲೆ ಹಾಯ್ದು ಹೋಗುವುದು ಪಕ್ಕಾ ಆದ ಕಾರಣ ಬಸ್ಸು ಸಿಗುವುದು, ಅದರಲ್ಲಿ ಕಿಟಕಿಯ ಬದಿಗಿನ ಸೀಟು ದಕ್ಕುವುದು ನಮಗೆಂದೂ ಕಷ್ಟವಾದದ್ದೇ ಇಲ್ಲ. ಒಂದು ದಿನ ಉಳಿದು ಅಮ್ಮ ಹುಬ್ಬಳ್ಳಿಗೆ ವಾಪಸ್ಸಾಗುತ್ತಿದ್ದಳು.

ಬಾಲ್ಯವೆಂಬ ಕಾಯಿಲೆಯಿಂದ ವಾಸಿಯಾಗಿ ಬರುವುದು ಅಷ್ಟು ಸುಲಭವಲ್ಲ. ತೋರಲಾಗದ ಗಾಯಗಳನ್ನೂ, ಸವರಲಾರದ ನೆನಪುಗಳನ್ನೂ ಅದು ಉಳಿಸಿ ಹೋಗಿರುತ್ತದೆ. ಮೆಹು ಮಾಮಿ ಮತ್ತು ಸದಾರ ಬದುಕಿನಲ್ಲಿ ನನ್ನ ಬಾಯ್ತುಪ್ಪಿನ ಅಚಾತುರ್ಯದಿಂದ ನಡೆದ ಪ್ರಮಾದ ಮತ್ತು ಒಂದಿಡೀ ಜೀವವನ್ನು ಒಂದೇ ಏಟಿಗಿಳಿಸಿದ ಆ ಘಟನೆ ನಡೆದದ್ದು ಮುಂದಿನ ನಾಲ್ಕೇ ದಿನಗಳಲ್ಲಿ ಎಂಬುದು ನೆನಪಾದರೆ ನಾನು ಅಮ್ಮನ ಜೊತೆಗೆ ಮರುದಿನವೇ ಏಕೆ ಹುಬ್ಬಳ್ಳಿಯ ಬಸ್ಸನ್ನು ಹತ್ತಲಿಲ್ಲ ಅಂತ ಪಶ್ಚಾತ್ತಾಪವಾಗುತ್ತದೆ.

ನನ್ನ ಬಳಿ ಅನುಪಮಾ ನಿರಂಜನ ಬರೆದ 'ದಿನಕ್ಕೊಂದು ಕತೆ' ಎಂಬ ಮಕ್ಕಳ ಕತೆಗಳ ಹನ್ನೆರಡು ಪುಸ್ತಕಗಳ ಸೆಟ್ ಇತ್ತು. ಅಂದು ಮಧ್ಯಾಹ್ನ ಊಟದ ಅನಂತರ ಎಲ್ಲರೂ ಮಲಗಿರುವಾಗ ನಾನು ಭಾದ್ರಪದ ಸಂಚಿಕೆಯನ್ನು ಹಿಡಿದು ದಣಪೆಯ ಮೇಲೆ ಕುಳಿತಿದ್ದೆ. ರಸ್ತೆಯಲ್ಲಿ ಒಬ್ಬನೇ ಬೆತ್ತ ಮತ್ತು ಕಲ್ಲುಗಳ ಜೊತೆಗೆ ಆಟವಾಡಿಕೊಳ್ಳುತ್ತಿದ್ದ ಸದಾ ನನ್ನನ್ನು ಗಮನಿಸಿ, "ಹೇಯ್, ಇದು ದಿನಕ್ಕೊಂದು ಕತೆ ಪುಸ್ತಕ ಅಲ್ಲಾ?" ಅಂದ.

"ಹೂಂ."

"ನಾನು ಜೇಷ್ಠ ಸಂಚಿಕೆಯನ್ನ ಮಾತ್ರ ಓದಿದ್ದೇನೆ."

"ಓಹ್."

"ಎಷ್ಟು ಪುಸ್ತಕ ಉಂಟು ಇಂಥದು?"

"ಟ್ವೆಲ್ವ್."

"ನನಗೂ ಒಂದು ಕೊಡ್ತೀ? ಓದಿ ಬೇಗ ಕೊಟ್ಟುಬಿಡ್ತೇನೆ."

"ಇಲ್ಪಾ, ನಮ್ಮಪ್ಪಾ ಬೈತಾರ."

ಕತೆ ಪುಸ್ತಕಗಳ ವಿಷಯವಾಗಿ ನನಗ್ಯಾರೂ ಬೈಯುವವರು ಇಲ್ಲವಾದರೂ ನನ್ನ ಸಂಗ್ರಹವನ್ನು ಹಂಚಿಕೊಳ್ಳಲು ನನಗೆ ಸುತಾರಾಂ ಇಷ್ಟವಿರಲಿಲ್ಲ.

"ಇಲ್ಲೇ ನಿನ್ನ ಮುಂದೇ ಓದಿ ಕೊಡ್ತೇನೆ ಬೇಕಾದ್ರೆ. ಪ್ಲೀಜ್?"

ಅವನು ಅಷ್ಟು ಸುಲಭಕ್ಕೆ ಅಲ್ಲಿಂದ ಸರಿಯುವವನಂತೆ ಕಾಣಲಿಲ್ಲ. ಹಸಿದವರ ಮುಂದೆ ಕೂತು ಪುಷ್ಕಳ ಭೋಜನ ಸೇವಿಸುವವರಂತೆ ನನಗೆ ಕಸಿವಿಸಿಯಾಯಿತು.

"ಸಂಜೆ ಒಳಗ ಕೊಟ್ಟು ಬಿಡಬೇಕ್ ನೋಡ. ನಮ್ಮಪ್ಪಾ ದಿನಾ ಚೆಕ್ ಮಾಡ್ತಾರ. ಒಂದ್ ಬುಕ್ ಇಲ್ಲದಿದ್ರೂ ಬೈಸಿಕೋ ಬೇಕಾಗತೇತಿ."